**ರಾಯರು:** ಏನಯ್ಯಾ ಗುಂಡ, ನೀನು ಕುಡಿತದ ಚಟಕ್ಕೆ ಬಲಿಯಾಗಿ ಮನೆಯಲ್ಲಿದ್ದ ಬೆಲೆಬಾಳುವ ವಸ್ತುಗಳನ್ನೆಲ್ಲಾ ಮಾರಿಬಿಟ್ಟೆಯಂತೆ ಹೌದಾ?
**ಗುಂಡ:** ಹೌದು ರಾಯರೆ.
**ರಾಯರು:** ಮತ್ತೆ ಮನೆಯನ್ನೂ ಮಾರಿಬಿಡಬೇಕಾಗಿತ್ತು.
**ಗುಂಡ:** ಮಾರಿಬಿಡ್ತಿದ್ದೆ. ಅಷ್ಟರಲ್ಲಿ ಸಿಕ್ಕಿಹಾಕಿಕೊಂಡುಬಿಟ್ಟೆ.
**ರಾಯರು:** ಅರೆ ಹೌದಾ? ಯಾರ ಕೈಗೆ ಸಿಕ್ಕಿಹಾಕಿಕೊಂಡೆ?
**ಗುಂಡ:** ಮನೆ ಮಾಲೀಕರ ಕೈಗೆ!

***

**ಹೆಂಡತಿ:** ರೀ... ಅಂಗಡಿಗೆ ಹೋಗಿ ಒಂದು ಕೆ.ಜಿ. ರವೆ ತಗೊಂಡು ಬನ್ನಿ.
**ಗಂಡ:** ಏನೇ ಕೇಸರಿಭಾತ್, ಉಪ್ಪಿಟ್ಟು ಮಾಡ್ತೀಯಾ?
**ಹೆಂಡತಿ:** ಇಲ್ಲ.
**ಗಂಡ:** ಮತ್ತೆ ರವೆ ಯಾಕೆ?
**ಹೆಂಡತಿ:** ನಿಮ್ಮೊಂದಿಗೆ ರವೆಯನ್ನು ಬಾಣಲೆಯಲ್ಲಿ ಹಾಕಿ ಹುರಿಯೋಕೆ!

***

**ಹೆಂಡತಿ:** ರೀ... ಚಪಾತಿಗೆ ಜೇನುತುಪ್ಪ ಹಾಕ್ಲಾ?
**ಗುಂಡ:** ಅಯ್ಯೋ ಬೇಡ ಕಣೆ! ಅದು ಜೇನುಹುಳದ ಬಾಯಿಂದ ಬಂದಿರುತ್ತೆ.
**ಹೆಂಡತಿ:** ಹಾಗಾದರೆ ಮೊಟ್ಟೆ ಪಲ್ಯ ಹಾಕ್ಲಾ?

***

**ಗುಂಡ:** ಸರ್ ವರದಕ್ಷಿಣೆ ಏನೂ ಬೇಡ. ವರದಕ್ಷಿಣೆ ಇಲ್ಲದೆಯೇ ನಿಮ್ಮ ಮಗಳನ್ನು ಮದುವೆ ಆಗಲು ಸಿದ್ಧನಿದ್ದೇನೆ.
**ಹೆಣ್ಣಿನ ತಂದೆ:** ಆದರೆ ಮಗಳು ಇನ್ನೂ ಓದುತ್ತಿದ್ದಾಳೆ.
**ಗುಂಡ:** ಸರಿ ಹಾಗಾದರೆ ನಾನು ಇನ್ನು ಒಂದು ಗಂಟೆ ಬಿಟ್ಟು ಬರ್ತೀನಿ.

***

**ಹೊಸ ಸೊಸೆ:** ಅತ್ತೆ ನಿನ್ನೆ ರಾತ್ರಿ ನಿಮ್ಮ ಮಗನ ಜೊತೆ ಘನಘೋರ ಜಗಳ ಆಗಿಹೋಯಿತು.
**ಅತ್ತೆ:** ಅಯ್ಯೋ ಬಿಡಮ್ಮ ಅವೆಲ್ಲ ಮಾಮೂಲಿ! ಇದು ಎಲ್ಲರ ಸಂಸಾರದಲ್ಲೂ ಇದ್ದದ್ದೆ.
**ಹೊಸ ಸೊಸೆ:** ಅದು ನನಗೂ ಗೊತ್ತಿದೆ ಅತ್ತೆ! ಆದರೆ, ಈಗ ಹೇಳಿ ಅವರ ಹೆಣವನ್ನು ಏನು ಮಾಡುವುದು?

***

**ಗುಂಡ:** ನಮಸ್ಕಾರಾ ಸರ್! ಈಕೆ ನನ್ನ ಧರ್ಮಪತ್ನಿ.
**ಗುಂಡಿ (ಗುಂಡನ ಕಡೆ ತಿರುಗಿ):** ರೀ... ಸುಮ್ಮನಿರಿ ಸಾಕು. ನಾನು ನಿಮ್ಮ ಧರ್ಮಪತ್ನಿ ಅಲ್ಲ.
**ರಾಯರು:** ಯಾಕೆ ತಾಯಿ ಹಾಗೆ ಹೇಳುತ್ತೀರಾ?
**ಗುಂಡಿ:** ಮತ್ತಿನ್ನೇನು ಸರ್? ಇವರು ನನ್ನನ್ನು ಮದುವೆಯಾಗುವಾಗ ಒಂದು ಲಕ್ಷ ವರದಕ್ಷಿಣೆ ತಗೊಂಡಿದಾರೆ. ಇನ್ನು ನಾನು ಹೇಗೆ ಇವರ ಧರ್ಮಪತ್ನಿಯಾಗುತ್ತೇನೆ. ನೀವೇ ಹೇಳಿ?

***

**ಗುಂಡಿ:** ರೀ... ನಿನ್ನೆ ರಾತ್ರಿ ನಮ್ಮ ಪಕ್ಕದ ಮನೆಯವನ ಹೆಂಡತಿ ಯಾರ ಜೊತೇನೋ ಓಡಿಹೋಗಿದ್ದಾಳಂತೆ.
**ಗುಂಡ:** ಅರೆ ಹೌದೇನೇ? ನಿಜವಾಗ್ಲೂ ಪಕ್ಕದ ಮನೆಯವನಷ್ಟು ಅದೃಷ್ಟವಂತ ಈ ಪ್ರಪಂಚದಲ್ಲಿ ಯಾರೂ ಇಲ್ಲ ಬಿಡು.




ನಿಮಗೆ ಸರ್ಕಾರ ನೀಡುವ ಸಂಬಳದಲ್ಲಿ ಹೆಚ್ಚಳವಾಯ್ತಲ್ಲಾ, ನಾವು ಕೊಡುವ ಗಿಂಬಳವನ್ನಾದ್ರೂ ಸ್ವಲ್ಪ ಕಡಿಮೆ ಮಾಡ್ಕೋಬಾರ್ದಾ ಸಾರ್




ನಾವು ಬೆಳೆಯುವ ಉತ್ಪನ್ನಕ್ಕೂ ಇಷ್ಟೇ ಬೆಲೆ ಹೆಚ್ಚಳ ಯಾವಾಗ ಮಾಡ್ತಾರಂತೆ?

***

**ಭಿಕ್ಷುಕ:** ಸ್ವಾಮಿ ಒಂದು ರೂಪಾಯಿ ಭಿಕ್ಷೆ ಹಾಕಿ.
**ಗುಂಡ:** ಅಲ್ಲಯ್ಯಾ ಕೈಕಾಲು ಗಟ್ಟಿಯಾಗಿದೆ. ಭಿಕ್ಷೆ ಬೇಡಲು ನಾಚಿಕೆಯಾಗುವುದಿಲ್ಲವೇ?
**ಭಿಕ್ಷುಕ:** ಅಲ್ಲಾ ಸ್ವಾಮಿ, ನೀವು ಕೊಡುವ ಒಂದು ರೂಪಾಯಿಗೆ ಕೈಕಾಲು ಮುರಿದುಕೊಂಡು ಭಿಕ್ಷೆ ಬೇಡಬೇಕಾ?

***

**ಗುಂಡ:** ಲೋ ಬದರಿ, ನಿನಗೆ ಗ್ಯಾಸ್ ಕಥೆ ಗೊತ್ತಾ?
**ಬದರಿ:** ಇಲ್ಲ. ಅದೇನಂತ ನೀನೇ ಹೇಳು.
**ಗುಂಡ:** ಅದು ನಮ್ಮ ಮನೆಯಲ್ಲಿದ್ದರೆ ನಮ್ಮ ಹೊಟ್ಟೆ ತುಂಬುತ್ತದೆ.
**ಬದರಿ:** ಹೌದು ಗೊತ್ತು! ಅದರಲ್ಲೇನು ವಿಶೇಷ?
**ಗುಂಡ:** ಅದು ನಮ್ಮ ಹೊಟ್ಟೆಯಲ್ಲಿದ್ದರೆ ಏನಾಗುತ್ತದೆ ಗೊತ್ತಾ?
**ಬದರಿ:** ಏನಾಗುತ್ತದೆ?
**ಗುಂಡ:** ಡಾಕ್ಟರ್ ಜೇಬು ತುಂಬುತ್ತದೆ.

***

**ಹೆಂಡತಿ:** ನಾನು ಯಾವುದಾದರೂ ಒಂದು ಕೆಲಸ ಶುರುಮಾಡಿದರೆ ಅದರಲ್ಲೇ ಮುಳುಗಿ ಹೋಗ್ತೀನಿ.
**ಗುಂಡ:** ಮತ್ತೆ ನೀನ್ಯಾಕೆ ಒಂದು ದೊಡ್ಡ ಹಳ್ಳ ತೋಡಬಾರದು?

***

**ಭಿಕ್ಷುಕಿ:** ಸರ್ ಬೇಗ ಭಿಕ್ಷೆ ಹಾಕಿ! ಅರ್ಜೆಂಟಾಗಿ ಮನೆಗೆ ಹೋಗಬೇಕು.
**ಗುಂಡ:** ಯಾಕಮ್ಮಾ ಅಷ್ಟು ಅರ್ಜೆಂಟು?
**ಭಿಕ್ಷುಕಿ:** ನಿಮಗೆ ಗೊತ್ತಿಲ್ವಾ ಸರ್? ಧಾರಾವಾಹಿಗಳು ಶುರುವಾಗಿಬಿಡುತ್ತವೆ.

***

**ಗೆಳೆಯ:** ಲವ್ ಮಾಡಿ ಮದುವೆಯಾಗುವುದು ಒಳ್ಳೆಯದಾ? ಮದುವೆಯಾಗಿ ಲವ್ ಮಾಡೋದು ಒಳ್ಳೆಯದಾ?
**ಗುಂಡ:** ಮದುವೆಯಾಗಿ ಲವ್ ಮಾಡೋದು ಒಳ್ಳೆಯದು. ಆದರೆ ಹೆಂಡತಿಗೆ ಗೊತ್ತಾಗಬಾರದು ಅಷ್ಟೆ.

***

**ಉಪಾಧ್ಯಾಯರು:** ಲೋ ಗುಂಡ, ಅಮೆರಿಕ ಕಂಡು ಹಿಡಿದದ್ದು ಯಾರು?
**ಗುಂಡ:** ಸರ್ ಮೊದಲು ನೀವು ಅದನ್ನು ಬಚ್ಚಿಟ್ಟಿದ್ದು ಯಾರು ಅಂತ ಹೇಳಿ! ಆಮೇಲೆ ನಾನು ಉತ್ತರ ಹೇಳುತ್ತೇನೆ.

***

**ಟೀಚರ್:** ಯಾರೋ ಅದು ಗೊರಕೆ ಹೊಡೆಯುತ್ತಾ ನಿದ್ದೆ ಮಾಡ್ತಿರೋದು?
**ಗುಂಡ:** ನಾನೇ ಟೀಚರ್! ನಿನ್ನೆ ನೀವೇ ಹೇಳಿದ್ರಲ್ಲ, ನಿದ್ದೆ ಆರೋಗ್ಯಕ್ಕೆ ತುಂಬಾ ಒಳ್ಳೇದು ಅಂತ. ಅದಕ್ಕೆ ಮಾಡ್ತಿದ್ದೆ.

***

**ಟೀಚರ್:** ನೀವು ತೇನ್ ಸಿಂಗ್ ಮತ್ತು ಹಿಲರಿ ಬಗ್ಗೆ ಕೇಳಿರಬೇಕಲ್ಲಾ?
**ವಿದ್ಯಾರ್ಥಿಗಳು:** ಹೌದು ಟೀಚರ್, ಕೇಳಿದ್ದೇವೆ.
**ಟೀಚರ್:** ಎಲ್ಲಿ, ಯಾವಾಗ ಕೇಳಿದ್ದಿರಿ?
**ವಿದ್ಯಾರ್ಥಿಗಳು:** ಇಲ್ಲೇ. ಈಗಲೇ ಟೀಚರ್. ನೀವೇ ಹೇಳಿದಿರಲ್ಲ.

***

**ಹೆಂಡತಿ:** ಟೀವಿ ಮುಂದೆ ಕುಳಿತುಕೊಂಡು ಸಿಕ್ಕಾಪಟ್ಟೆ ಆಕ್ಷೀ ಆಕ್ಷೀ ಅಂತ ಪದೇ ಪದೇ ಸೀನುತ್ತಿದ್ದೀರಲ್ಲ ಯಾಕೆ?
**ಗುಂಡ:** ಓ... ಅದಾ? ಟೀವಿಯಲ್ಲಿ 'ಒಗ್ಗರಣೆ' ಸಿನಿಮಾ ನೋಡ್ತಾ ಇದ್ದೆ, ಅದಕ್ಕೆ.

ಸಂಗ್ರಹ: ಎಂ.ಕೆ.ಮಂಜುನಾಥ್, ಬೆಂಗಳೂರು